# ಇ-ಬಸ್: ವಿದ್ಯುತ್ ರಿಯಾಯಿತಿ ಕೋರಿದ ಬಿಎಂಟಿಸಿ

## ವಿದ್ಯುತ್ ದರದಲ್ಲಿ ಪ್ರತಿ ಯೂನಿಟ್‌ಗೆ ಕನಿಷ್ಠ 1.50 ರೂ. ರಿಯಾಯಿತಿ ನೀಡಲು ಕೆಇಆರ್‌ಸಿಗೆ ಮನವಿ

**ಬೆಂಗಳೂರು:** ಎಲೆಕ್ಟ್ರಿಕ್ ವಾಹನಗಳನ್ನು ರಸ್ತೆಗಿಳಿಸಲು ಸಿದ್ಧತೆ ನಡೆಸಿರುವ ಬಿಎಂಟಿಸಿ, ಇದಕ್ಕೆ ಪೂರಕವಾಗಿ 'ಇ-ವಾಹನ'ಗಳ ಚಾರ್ಜಿಂಗ್‌ಗೆ ಮುಂದಿನ ದಿನಗಳಲ್ಲಿ ಭಾರಿ ಪ್ರಮಾಣದಲ್ಲಿ ಬಳಕೆಯಾಗಲಿರುವ ವಿದ್ಯುತ್ ದರದಲ್ಲಿ ರಿಯಾಯಿತಿ ನೀಡುವಂತೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಕೆಇಆರ್‌ಸಿ)ಕ್ಕೆ ಮನವಿ ಸಲ್ಲಿಸಿದೆ.

ಸ್ಮಾರ್ಟ್‌ಸಿಟಿ ಯೋಜನೆ ಅಡಿ 9 ಮೀ. ಉದ್ದದ 90 ನಾನ್ ಎಸಿ ಎಲೆಕ್ಟ್ರಿಕ್ ಬಸ್‌ಗಳು ರಸ್ತೆಗಿಳಿಯುತ್ತಿವೆ. ಇದರ ಬೆನ್ನಲ್ಲೇ ಕೇಂದ್ರದ ಮಹತ್ವಾಕಾಂಕ್ಷಿ 'ಫೇಮ್-2' ಯೋಜನೆ ಅಡಿ 12 ಮೀ. ಉದ್ದದ 300 ಎಲೆಕ್ಟ್ರಿಕ್ ಬಸ್‌ಗಳು ಬರಲಿವೆ. ಇವುಗಳ ಚಾರ್ಜಿಂಗ್‌ಗೆ ಪ್ರತಿ ವರ್ಷ ಸುಮಾರು 30ರಿಂದ 32 ಮಿಲಿಯನ್ ಯೂನಿಟ್ ವಿದ್ಯುತ್ ಬೇಕಾಗುತ್ತದೆ. ಹಾಗಾಗಿ, ಬಿಎಂಟಿಸಿಯು ಈ ಉದ್ದೇಶಕ್ಕೆ ಬಳಕೆ ಮಾಡುವ ವಿದ್ಯುತ್ ದರದಲ್ಲಿ ಪ್ರತಿ ಯೂನಿಟ್‌ಗೆ ಕನಿಷ್ಠ 1.50 ರೂ. ರಿಯಾಯಿತಿ ನೀಡಬೇಕು ಎಂದು ಈ ಹಿಂದೆ ಆಕ್ಷೇಪ ಸಲ್ಲಿಸಲಾಗಿದೆ.

ಸೋಮವಾರ ಆಕ್ಷೇಪಣೆ ವಿಚಾರಣೆಗೆ ಬಂದಿದ್ದು, ಕೆಇಆರ್‌ಸಿ ಎದುರು ಬಿಎಂಟಿಸಿಯು ತನ್ನ ವಾದ ಮಂಡಿಸಿತು. ಒಂದೆಡೆ ತೈಲ ಬೆಲೆ ದಿನದಿಂದ ದಿನಕ್ಕೆ ಏರುತ್ತಿದ್ದು ವಾರ್ಷಿಕ ಡೀಸೆಲ್ ಖರ್ಚು ಶೇ. 24ರಷ್ಟಿದೆ. ಮತ್ತೊಂದೆಡೆ ವಿದ್ಯುತ್‌ಚಾಲಿತ ವಾಹನಗಳೂ ಬರುತ್ತಿವೆ. ಈ ಹಿನ್ನೆಲೆಯಲ್ಲಿ ನಿಧಾನವಾಗಿ ಬಿಎಂಟಿಸಿಯು ಈ ಮಾದರಿಯ ವಾಹನಗಳತ್ತ ಮುಖಮಾಡುತ್ತಿದೆ. 390 ಬಸ್‌ಗಳಲ್ಲದೆ, 2022-23ರಲ್ಲಿ ಇನ್ನೂ 1,500 ಇ-ವಾಹನಗಳನ್ನು ಖರೀದಿಸಲು ಉದ್ದೇಶಿಸಿದೆ. ಹೀಗಾಗಿ ವಿದ್ಯುತ್ ಬಳಕೆ ಹೆಚ್ಚಲಿದೆ.

**ನಾನ್ ಪೀಕ್ ಅವರ್‌ನಲ್ಲಿ ರಿಯಾಯಿತಿ ಕೊಡಿಸಿ:** ಪ್ರಯಾಣಿಕರ ಹಿತದೃಷ್ಟಿಯಿಂದ ಹಾಗೂ ಬಿಎಂಟಿಸಿಯ ಆರ್ಥಿಕ ಹೊರೆಯನ್ನು ಪರಿಗಣಿಸಿ ಮತ್ತು ರಾಜ್ಯದಲ್ಲಿ ವಿದ್ಯುತ್‌ನಲ್ಲಿ ಸ್ವಾವಲಂಬನೆ ಸಾಧಿಸುತ್ತಿದೆ. ಈ ಎಲ್ಲ



ಅಂಶಗಳನ್ನು ಮನಗಂಡು 'ಪೀಕ್ ಅವರ್' ಇಲ್ಲದ ಸಮಯದಲ್ಲಿ ಅಂದರೆ ರಾತ್ರಿ 10ರಿಂದ ಬೆಳಗಿನ ಜಾವ 6ರವರೆಗೆ ಪ್ರತಿ ಯೂನಿಟ್ ಮೇಲೆ 1.50 ರೂ. ರಿಯಾಯಿತಿ ನೀಡಬೇಕು ಎಂದು ವಿಚಾರಣೆ ವೇಳೆ ಸಾರಿಗೆ ಸಂಸ್ಥೆಯು ಆಯೋಗಕ್ಕೆ ಮನವಿ ಮಾಡಿತು.

**ವಾರ್ಷಿಕ 4.5 ಕೋಟಿ ರೂ. ಉಳಿತಾಯ:** ಪ್ರಸ್ತುತ 'ನಮ್ಮ ಮೆಟ್ರೋ'ಗೆ ಪ್ರತಿ ಯೂನಿಟ್‌ಗೆ 5 ರೂ. ದರದಲ್ಲಿ ಬೆಸ್ಕಾಂ ವಿದ್ಯುತ್ ಪೂರೈಸುತ್ತಿದೆ. ಬಿಎಂಟಿಸಿಯು 1.50 ರೂ. ರಿಯಾಯಿತಿ ಅಂದರೆ ಪ್ರತಿ ಯೂನಿಟ್‌ಗೆ 3.5 ರೂ. ನಿಗದಿಪಡಿಸುವಂತೆ ಕೋರಿದೆ. ಫೇಮ್-2 ಅಡಿ ಬರುವ 300 ಹಾಗೂ ಸ್ಮಾರ್ಟ್‌ಸಿಟಿ ಅಡಿ 90 ಸೇರಿ 390 ಬಸ್‌ಗಳು ವಾರ್ಷಿಕ ಕ್ರಮವಾಗಿ 24.25 ಮಿಲಿಯನ್ ಯೂನಿಟ್ ಮತ್ತು 5.67 ಮಿಲಿಯನ್ ಯೂನಿಟ್ ವಿದ್ಯುತ್ ಚಾರ್ಜಿಂಗ್‌ಗಾಗಿ ಬಳಕೆ ಆಗಲಿದೆ ಎಂದು ಅಂದಾಜಿಸಲಾಗಿದೆ. ಒಂದು ವೇಳೆ ಆಯೋಗವು ರಿಯಾಯಿತಿ ನೀಡಲು ಸಮ್ಮತಿಸಿದರೆ, ಅನಾಯಾಸವಾಗಿ ವಾರ್ಷಿಕ 4.5 ಕೋಟಿ ರೂ. ಉಳಿತಾಯ ಆಗಲಿದೆ ಎಂದು ಬಿಎಂಟಿಸಿ ಅಂದಾಜಿಸಿದೆ.

ಅಷ್ಟಕ್ಕೂ ನೆರೆಯ ಮಹಾರಾಷ್ಟ್ರ ಮತ್ತು ದೆಹಲಿಯಲ್ಲಿ ಆಯಾ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗಗಳು ಕ್ರಮವಾಗಿ ಶೇ. 15 ಮತ್ತು ಶೇ. 20ರಷ್ಟು ಸ್ಥಳೀಯ ಸಾರಿಗೆ ಸಂಸ್ಥೆಗಳಿಗೆ ವಿದ್ಯುತ್ ಬಳಕೆಯಲ್ಲಿ ರಿಯಾಯಿತಿ ನೀಡಿವೆ.

- **1.50 ರೂ. ಪ್ರತಿ ಯೂನಿಟ್‌ಗೆ ಬಿಎಂಟಿಸಿ ಕೇಳಿರುವ ರಿಯಾಯಿತಿ**
- **5 ರೂ. ಪ್ರತಿ ಯೂನಿಟ್‌ಗೆ ಇರುವ ವಿದ್ಯುತ್ ದರ (ಬಿಎಂಆರ್‌ಸಿಎಲ್‌ಗೆ ನೀಡುತ್ತಿರುವುದು)**
- **90 ಸ್ಮಾರ್ಟ್‌ಸಿಟಿ ಅಡಿ ಬರಲಿರುವ ಇ-ಬಸ್‌ಗಳು**
- **300 ಫೇಮ್-2 ಅಡಿ ಬರಲಿರುವ ಇ-ಬಸ್‌ಗಳು**
- **30 ಮಿ.ಯೂ. ಚಾರ್ಜಿಂಗ್‌ಗೆ ಬಳಕೆಯಾಗಲಿರುವ ವಾರ್ಷಿಕ ವಿದ್ಯುತ್**
- **1,500 ಇ-ಬಸ್‌ಗಳು 2022-23ಕ್ಕೆ ರಸ್ತೆಗಿಳಿಯಲಿವೆ**
- **80 ಮಿ.ಯೂ. ಚಾರ್ಜಿಂಗ್‌ಗೆ ಬೇಕಾಗುವ ವಾರ್ಷಿಕ ವಿದ್ಯುತ್**

ಒಂದೆಡೆ ಸರ್ಕಾರಗಳು ಸಮೂಹ ಸಾರಿಗೆಗೆ ಆದ್ಯತೆ ನೀಡಲು ಯೋಜನೆಗಳನ್ನು ರೂಪಿಸುತ್ತಿವೆ. ಮತ್ತೊಂದೆಡೆ ಅದಕ್ಕೆ ಪ್ರೋತ್ಸಾಹದಾಯಕ ಕ್ರಮಗಳೂ ಬಂದರೆ, ಹೆಚ್ಚು ಅನುಕೂಲ ಆಗಲಿದೆ ಎಂದು ಮನವಿಯಲ್ಲಿ ಹೇಳಿತು. ಅಂದಹಾಗೆ, ನಗರದಲ್ಲಿ ಅಂದಾಜು 94 ಲಕ್ಷ ವಾಹನಗಳಿದ್ದು ಇದರಲ್ಲಿ 55-60 ಲಕ್ಷ ದ್ವಿಚಕ್ರ ವಾಹನಗಳಿವೆ. ಪರೋಕ್ಷವಾಗಿ ಸಂಚಾರದಟ್ಟಣೆಗೂ ಕೆಇಆರ್‌ಸಿ ಆದೇಶ ನೆರವಾಗಲಿದೆ ಎಂದೂ ಬಿಎಂಟಿಸಿ ತನ್ನ ಆಕ್ಷೇಪಣೆಯಲ್ಲಿ ತಿಳಿಸಿದೆ.